O.S. ನಂಬರಃ 49/2018

ಪಿ. ಡಬ್ಲ್ಯೂಃ 3

ದಿಃ 05-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಬೈರವ ನಾಯಕ |
| ತಂದೆಯ ಹೆಸರುಃ | ದೇವಪ್ಪ ನಾಯಕ |
| ವಯಸ್ಸುಃ | **57** ವರ್ಷ |
| ಉದ್ಯೋಗಃ | ವಕೀಲ ವೃತ್ತಿ |
| ವಿಳಾಸಃ | ಅಂಕೋಲಾ. |

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಎನ್ ಎಂ ಎನ್ ರವರಿಂದಃ

ನಾನು ಈ ಪ್ರಕರಣದಲ್ಲಿ ನಾನು ಸಲ್ಲಿಸಿದ ಕಮಿಷನ್ ವರದಿ ಮೇಲೆ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನಿಪಿ-9 ಮತ್ತು 10 ರ ಮೇಲಿರುವ ಸಹಿ ನನ್ನದು. ಸಹಿಗಳನ್ನು ನಿಪಿ-9 ಎ ಮತ್ತು 10 ಎ ಎಂದು ಗುರುತಿಸಲಾಯಿತು. ( ನಿಪಿ-9 ಮತ್ತು 10 ರ ಮೂಲ ಪ್ರತಿಗಳು ಓ ಎಸ್ ನಂ.6/2004 ನೇದ್ದರಲ್ಲಿ ಇರುತ್ತವೆ). 2 ನೇ ವಾದಿಯು ತಮ್ಮ ಜಾಗದಲ್ಲಿ ಪ್ರತಿವಾದಿಯರು ಅತಿಕ್ರಮಣ ಮಾಡಿರುತ್ತಾರೆ ಎಂದು ಅರ್ಜಿಯನ್ನು ಸಲ್ಲಿಸಿದ್ದು, ಅದನ್ನು ತೋರಿಸಲು ತಿಳಿಸಿದ್ದು, ಅದರಂತೆ ನಾನು ವರದಿಯನ್ನು ಸಲ್ಲಿಸಿರುತ್ತೇನೆ. ಅದರ ಜೊತೆಗೆ ನಾನು ಯಾವ ಜಾಗದಲ್ಲಿ ಅತಿಕ್ರಮಣ ಮಾಡಿರುತ್ತಾರೆ ಎಂದು ತೋರಿಸಿ, ನಕ್ಷೆಯನ್ನು ತಯಾರಿಸಿ ಹಾಜರುಪಡಿಸಿರುತ್ತೇನೆ. ನಾನು ಮೂಲ ದಾವಾ ನಂ.6/2004 ನೇದ್ದರಲ್ಲಿ ನಿಪಿ-18 ಮತ್ತು 20 ನೆದ್ದರಂತೆ ನಕ್ಷೆಯನ್ನು ಹಾಜರುಪಡಿಸಿರುತ್ತೇನೆ. ನಾನು ಎರಡು ಸಲ ಕಮೀಷನ್ ವರದಿಯನ್ನು ಸಲ್ಲಿಸಿರುತ್ತೇನೆ. ವಾದಿಯರು ಕೇಳಿಕೊಂಡ ಪ್ರಕಾರ ನಾನು ಎರಡನೇ ವರದಿಯನ್ನು ತಯಾರಿಸಿ ಹಾಜರುಪಡಿಸಿರುತ್ತೇನೆ. 1 ಮತ್ತು 2 ನೇ

ವರದಿಗಳನ್ನು ತಯಾರಿಸುವಾಗ ಜಾಗದಲ್ಲಿ ವ್ಯತ್ಯಾಸ ಕಂಡುಬಂದಿದ್ದು, ನಾನು ವರದಿಯಲ್ಲಿ ನಮೂದಿಸಿರುತ್ತೇನೆ. ನಾನು ವರದಿಯ ಜೊತೆಗೆ ಹಾಜರುಪಡಿಸಿದ ನಕ್ಷೆಯಲ್ಲಿಯೂ ಸಹ ನಮೂದು ಮಾಡಿರುತ್ತೇನೆ.

ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಂ. ಪಿ ಬಿ ರವರಿಂದಃ

ನಾನು ಇಲ್ಲಿಯವರೆಗೆ 3 ರಿಂದ 4 ಪ್ರಕರಣಗಳಲ್ಲಿ ವರದಿಯನ್ನು ಸಲ್ಲಿಸಿರುತ್ತೇನೆ. ಈ ಪ್ರಕರಣದ ಪಕ್ಷಗಾರರು ಯಾರು ಎಂದು ಗೊತ್ತಿರುವುದಿಲ್ಲ, ಆದರೆ ವರದಿಯನ್ನು ನೋಡಿ ಹೇಳಬಹುದು. ಮೂಲ ದಾವಾ ನಂ. 6/2004 ನೇದ್ದರಲ್ಲಿ ನನ್ನ ಸಾಕ್ಷಿ ಆಗಿರುವುದರ ಬಗ್ಗೆ ಸುಮಾರು ವರ್ಷಗಳು ಆಗಿದ್ದರಿಂದ ನನಗೆ ನೆನಪಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಕಾಗದ ಪತ್ರಗಳನ್ನು ನೋಡಿಕೊಂಡು ಸಾಕ್ಷಿ ನುಡಿಯುತ್ತಿದ್ದೇನೆ ಹೊರತು ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಾನು ಹಾಜರುಪಡಿಸಿದ ವರದಿಗಳಲ್ಲಿ ಎಷ್ಟು ಜಾಗ ಅತಿಕ್ರಮಣಸಿ ಮಾಡಿಕೊಂಡಿರುತ್ತಾರೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು Memo of instructions ಪ್ರಕಾರ ನಾನು ಕಮೀಷನ ವರದಿಯನ್ನು ಸಲ್ಲಿಸಿರುತ್ತೇನೆ.

2. ನಾನು ಮೂಲ ದಾವಾ ನಂ.6/2004 ನೇದ್ದರಲ್ಲಿ ಸಲ್ಲಿಸಿದ ನಕ್ಷೆಗಳ ಮೇಲೆ ನನ್ನ ಸಹಿ ಇರುವುದರ ಬಗ್ಗೆ ನನಗೆ ಈಗ ನೆನಪು ಇರುವುದಿಲ್ಲ. ಸಾಕ್ಷಿಗೆ ಮೂಲ ದಾವಾ ನಂ. 6/2004 ನೇದ್ದರಲ್ಲಿ ಹಾಜರುಪಡಿಸಿದ ನಕ್ಷೆಗಳಲ್ಲಿ ನನ್ನ ಸಹಿ ಇರುತ್ತದೆ. ಕಮಿಷನರ ಎಂದು ಎಲ್ಲಿಯೂ ಸಹ ಬರೆದಿರುವುದಿಲ್ಲ ಎಂದರೆ ಸರಿ. ನನಗೆ ಸಾಕಷ್ಟು ಪ್ರಕರಣಗಳಲ್ಲಿ ಕಮಿಷನ್ ವರದಿಯನ್ನು ಹಾಕಿ ಅನುಭವ ಇರುತ್ತದೆ. ಯಾವುದೇ ವರದಿಯನ್ನು ಸಲ್ಲಿಸಬೇಕಾದರೆ ವರದಿಗಳಲ್ಲಿ ಕಮಿಷನರ್ ಎಂದು ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ. ನಕ್ಷೆಗಳಲ್ಲಿ ಕಮಿಷನರ್ ಎಂದು ನಮೂದು ಮಾಡಿರುವುದು ಕಂಡುಬರುತ್ತಿದೆ.

3. ವಾದಿಯ ಜಾಗದ ಸುತ್ತಲೂ ಬೇಲಿ ಇರುತ್ತದೆಯೋ ಅಥವಾ ಪಾಗಾರ ಇರುತ್ತದೆಯೋ ಎಂದು ಕೇಳಿದ್ದಕ್ಕೆ ಸಾಕ್ಷಿಯು ಬಹಳ ವರ್ಷವಾಗಿದ್ದರಿಂದ ಈಗ ಹೇಳಲು ಬರುವುದಿಲ್ಲ, ಕೆಲವು ಕಡೆ ಬೇಲಿ ಇದ್ದು, ಇನ್ನೂ ಕೆಲವು ಕಡೆ ಪಾಗಾರ ಇರುತ್ತದೆ ಎಂದು ನುಡಿಯುತ್ತಾರೆ. ಪೂರ್ವದಿಕ್ಕಿನಲ್ಲಿ ಪಾಗಾರ ಇತ್ತೋ ಅಥವಾ ಬೇಲಿ ಇತ್ತೋ ಎಂದು ಕೇಳಿದ್ದಕ್ಕೆ ಸಾಕ್ಷಿಯು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಮೂಲ ದಾವಾ ನಂ.6/2004 ನೇದ್ದರ ದಾವಾ ಜಮೀನಿನ ಪೂರ್ವ ದಿಕ್ಕಿನಲ್ಲಿ ಆವಾರದ ಗೋಡೆ ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ವರದಿಯಲ್ಲಿ ಬರೆದಿರುವ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ ಎಂದರೆ ಸರಿ. ಮೂಲ ದಾವಾ ನಂ.6/2004 ನೇದ್ದರ ದಾವಾ ಜಮೀನಿನ ಪೂರ್ವ ದಿಕ್ಕಿನ ಜಮೀನು ಎತ್ತರದಲ್ಲಿತ್ತೋ ಅಥವಾ ತಗ್ಗಲ್ಲಿ ಇತ್ತೋ ಎಂದು ಕೇಳಿದ್ದಕ್ಕೆ ಸಾಕ್ಷಿಯು ವರದಿಯನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಾನು ದಾವಾ ಜಮೀನಿಗೆ ಹೋದ ಸಮಯದಲ್ಲಿ ಯಾವುದೇ ರೀತಿಯ ಬೆಳೆಗಳು ಇರಲಿಲ್ಲ. ನನ್ನ ವರದಿಯಲ್ಲಿ ಎಷ್ಟು ವರ್ಷಗಳಿಂದ ಬೆಳೆಗಳನ್ನು ಬೆಳೆಯುತ್ತಿಲ್ಲ ಎನ್ನುವದರ ಬಗ್ಗೆ ಬರೆದಿರುವುದಿಲ್ಲ. ನಾನು ನೀರು ಹೋಗುವ ಕಾಲುವೆಗಳನ್ನು ನನ್ನ ವರದಿಯಲ್ಲಿ ತೋರಿಸಿರುತ್ತೇನೆ.

4. ಮೂಲ ದಾವಾ ನಂ.6/2004 ರಲ್ಲಿ ವಾದಿಯ ಜಮೀನಿನಲ್ಲಿ ಯಾವ ಕಾಲುವೆಯಲ್ಲಿ ನೀರು ಹರಿಯುತ್ತಿದದೆ ಎಂದು ತೋರಿಸಿದ್ದೀರಾ ಎಂದು ಕೇಳಿದ್ದಕ್ಕೆ ಸಾಕ್ಷಿಯು ನಾನು memo of instructions ಪ್ರಕಾರ ತೋರಿಸಿದ್ದು, ಆದರೆ ಇದೇ ಎಂದು ಹೇಳಲು ಆಗುವುದಿಲ್ಲ. ನಾನು ಕಮಿಷನ್ ಮಾಡುವ ಕಾಲಕ್ಕೆ ಸರ್ವೆ ನಕಾಶೆಯನ್ನು ನೋಡಿ ಮಾಡಿರುವುದಿಲ್ಲ ಎಂದರೆ ಸರಿ. ವಕೀಲರು ಕೊಟ್ಟ memo of instructions ಪ್ರಕಾರ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ವಾದಿಯರ ಜಮೀನಿನ ಎಷ್ಟು ಗುಂಟೆಯ ಜಮೀನನ್ನು ಅತಿಕ್ರಮಣ ಮಾಡಿರುತ್ತಾರೆ ಎಂದು ವರದಿಯಲ್ಲಿ

ತೋರಿಸಿರುವುದಿಲ್ಲ.  ದಾವಾ ಜಮೀನಿನ ಸುತ್ತು ಯಾರು ಪಾಗಾರ ಹಾಕಿರುತ್ತಾರೆ  ಹಾಗೂ ಎಷ್ಟು ವರ್ಷಗಳಿಂದ ಹಾಕಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ  ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.